<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

**ಓ.ಎಸ್ ಸಂಖ್ಯೆ. 304/2022** ಪಿ.ಡಬ್ಲೂ .1

ದಿನಾಂಕಃ 19-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ- 2 ನೇ ಪ್ರತಿವಾದಿ ಪರ ವಕೀಲರಿಂದಃ-**

ದಾವಾ ಐಟಂ ನಂ. "ಎ" ಅನುಸೂಚಿಯ ವಿಸ್ತೀರ್ಣ ಗೊತ್ತಿಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ಗೊತ್ತು. ನಿಪಿ. 2 ರಂತೆ ದಾವಾ ಐಟಂ ನಂ. "ಎ" ಅನುಸೂಚಿಯ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಹೌದು. ಸದರಿ 1 ನೇ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಹೌದು.

ನನ್ನ ತಂದೆ 2008 ರಲ್ಲಿ ಮರಣ ಹೊಂದಿರುತ್ತಾರೆ. ನಾನು ಮದುವೆಯಾದ ನಂತರ ಗಂಡನ ಮನೆ ಸಿ.ವಿ. ರಾಮನ್ ನಗರದಲ್ಲಿ 35 ವರ್ಷಗಳಿಂದ ವಾಸ ಇದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಳಾಸ ಸುಳ್ಳು ಆಗಿರುತ್ತದೆ. ನನ್ನ ತಂದೆ ಮರಣ ಹೊಂದುವ ಪೂರ್ವದಿಂದಲೂ ಸಿ.ವಿ. ರಾಮನ್ ನಗರದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಅದೇ ರೀತಿ ಉಳಿದ ವಾದಿಯರು ಸಹ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಹೌದು. 1 ಮತ್ತು 2 ನೇ ವಾದಿಯರು ಸುಮಾರು 40 ವರ್ಷಗಳಿಂದ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಹೌದು. ಅದೇ ರೀತಿ 4 ಮತ್ತು 5 ನೇ ವಾದಿಯರು ಸುಮಾರು 30-35 ವರ್ಷಗಳಿಂದ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಹೌದು. ನಮ್ಮ ತಂದೆ ನಮ್ಮ ಜೊತೆ ಮತ್ತು 1 ನೇ ಪ್ರತಿವಾದಿಯೊಂದಿಗೂ ಸಹ ವಾಸ ಇರುತ್ತಿದ್ದರು. ನಮ್ಮ ತಂದೆ ನಮ್ಮ ಜೊತೆ ವಾಸ ಇರುವ ಸಮಯದಲ್ಲಿ ಭಾಗ ಕೊಡಿ ಎಂದು ನಾವು ಕೇಳಿರುವುದಿಲ್ಲ. ದಾವಾ ಐಟಂ ಎ ಅನುಸೂಚಿ ಆಸ್ತಿಯನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ನಿಪಿ. 4 ರಂತೆ ರೂ. 3,06000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ನಮೂದು ಇದೆ ಎಂದರೆ ಹೌದು. ಸದರಿ ಆಸ್ತಿ 1 ನೇ ಪ್ರತಿವಾದಿ ಸ್ವಂತ ಆಸ್ತಿಯಾಗಿದ್ದು, ತನ್ನ ಕುಟುಂಬದ ಖರ್ಚುಗಳಿಗಾಗಿ ಮಾರಾಟ ಮಾಡಿರುತ್ತಾರೆ ಎಂದು ನಿಪಿ. 4 ರಲ್ಲಿ ಬರೆದಿದೆ ಎಂದರೆ ಹೌದು. ಸದರಿ ನಿಪಿ. 4 ರಲ್ಲಿ ಹೆಣ್ಣುಮಕ್ಕಳ ತಕರಾರು ಇರುವುದಿಲ್ಲ ಎಂದು ಬರೆದಿದೆ ಎಂದರೆ, ಆ ರೀತಿ ಅವರು ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರಗಳನ್ನು ದಾವಾ ಪತ್ರದಲ್ಲಿ

ಹೇಳಿದ್ದೇನೆ. ಮೇಲಿನ ವಿಚಾರಗಳು ನನಗೆ ಗೊತ್ತಿದ್ದರು ಸಹ ಬೇಕಂತಲೇ ಸದರಿ ವಿಚಾರಗಳನ್ನು ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ 2012 ರಲ್ಲಿ ಗೊತ್ತಾಗಿರುತ್ತದೆ. ದಾವಾ ಐಟಂ ನಂ. "ಎ" ಅನುಸೂಚಿಯ ಆಸ್ತಿ 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯಾಗಿದ್ದು, ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನಮಗೂ ಸಹ ಹಕ್ಕು ಇದೆ ಎಂಬುದರ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಹೇಳಿರುವುದಿಲ್ಲ. ನಮ್ಮ ಕುಟುಂಬದ ಬೇರೆ ಆಸ್ತಿಗಳು ಸಹ ಇದ್ದು, ಅವುಗಳನ್ನು ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು ಈ ದಾವೆಯಲ್ಲ್ ಸೇರಿಸಿಲ್ಲ ಎಂದರೆ ಹೌದು. ಅದೇ ರೀತಿ ಸದರಿ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ಅದೇ ರೀತಿ ಒಂದು ಕಾನೇಷುಮಾರಿ 133 ರ ಮತ್ತೊಂದು ಭಾಗದ ಆಸ್ತಿಯನ್ನು ಈ ದಾವೆಯಲ್ಲ್ ಸೇರಿಸಿಲ್ಲ ಎಂದರೆ, ಆ ರೀತಿಯ ಯಾವುದೇ ಆಸ್ತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. "ಎ" ಅನುಸೂಚಿಯ ಆಸ್ತಿ ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿರುತ್ತದೆ ಎಂಬುದರ ಬಗ್ಗೆ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಅದು ನನ್ನ ತಾತನಿಗೆ ಸೇರಿದ ಆಸ್ತಿಯಾಗಿರುತ್ತದೆ.

ದಾವಾ ಐಟಂ ನಂ. "ಎ" ಅನುಸೂಚಿಯ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಂದ ಹಣದಿಂದ 1 ನೇ ಪ್ರತಿವಾದಿ ಬೇರೆ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಜೀವಂತ ಇದ್ದ ಕಾಲದಲ್ಲಿ ವಾದಿಯರಾದ ನಾವೆಲ್ಲರೂ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸುಳ್ಳು. ನಿಪಿ. 1 ರ ದಾಖಲೆಯನ್ನು ನನ್ನ ಹೇಳಿಕೆ ಮೇರೆಗೆ ಬರೆದಿರುತ್ತದೆ ಎಂದರೆ ಸರಿ. ಸರ್ಕಾರದಿಂದ ದೃಡೀಕರಣ ಪಡೆದಿಲ್ಲ ಎಂದರೆ ಹೌದು. ದಾವಾ ಐಟಂ ನಂ. "ಎ" ಅನುಸೂಚಿಯ ಆಸ್ತಿಯನ್ನು 2 ನೇ ಪ್ರತಿವಾದಿ ಖರೀದಿಸಿದ ನಂತರ ಸದರಿ ಆಸ್ತಿಯಲ್ಲಿ ನಮಗೂ ಸಹ ಭಾಗ ಇದೆ ಎಂದು ಬರವಣಿಗೆ ಮೂಲಕ ಪ್ರಶ್ನೇ ಮಾಡಿಲ್ಲ. ಮೌಖಿಕವಾಗಿ ಪ್ರಶ್ನಿಸಿರುತ್ತೇನೆ. ನಿಪಿ. 4 ರಂತೆ 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಹೌದು. ಅದೇ ರೀತಿ ಕಂದಾಯವನ್ನು ಸಹ ಪಾವತಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ.

ದಾವಾ  ಐಟಂ ನಂ. "ಎ" ಅನುಸೂಚಿಯ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಹೌದು. ಆ ರೀತಿ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ವಾದಿಯರಾದ ನಮಗೆ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.